ಸಂತ್ರಸ್ತರು ಅಂತ ಹೇಳ್ಕೊಳ್ಳೋದಕ್ಕೆ ಇಷ್ಟ ಆಗಲ್ಲ. ನಮ್ಮ ಹಂಪಿಯ ಪಾರಂಪರಿಕ ರಕ್ಷಣೆಗಾಗಿ ಇದು ನಮ್ಮ ಡ್ಯೂಟಿ ಸರ್'.

ವೀರೇಶ ತುಸು ತಡೆತಡೆದು ಹೇಳಿದರೂ ಅವನ ಧ್ವನಿಯಲ್ಲಿ ಅಭಿಮಾನ ಡಾಳಾಗಿ ಧ್ವನಿಸಿತು. 'ಪರಿಹಾರ ಮರು ವಸತಿ ಸರಿಯಾಗಿ ಸಿಕ್ಕಿದಾ?' ಮತ್ತೊಬ್ಬ ಕೇಳಿದ.

'ಅದನ್ನ ಹೀಗೆಯೇ ಅಂತ ಹೇಗೆ ಹೇಳೋದು ಸರ್? ಸ್ವಂತ ಜಮೀನು ಮನೆ ಇದ್ದವರಿಗೆ ಏನೋ ಒಂದು ವ್ಯವಸ್ಥೆ. ಇಲ್ಲೇ ಹೊರಗೆ ಕಲ್ಲು ಮಂಟಪಗಳಲ್ಲಿ ಮನೆ ಮಾಡಿಕೊಂಡು ಕೂಲಿ, ಹೂ ವ್ಯಾಪಾರ, ಬಳೆ ವ್ಯಾಪಾರ ಅಂತೆಲ್ಲ ಇದ್ದೋರಿಗೆ ಯಾವ ಲೆಕ್ಕ? ಹಂಪಿಯ ಹೆರಿಟೇಜ್ ಅಂದ್ರೆ ಇಲ್ಲಿರುವ ಜನ ಪರಂಪರೆಯೂ ಸೇರಿದ್ದೋ ಅಲ್ಲಾ ಪಳೆಯುಳಿಕೆಗಳ ರಕ್ಷಣೆ ಮಾತ್ರವೋ ಅನ್ನೋ ದ್ವಂದ್ವ ಸರ್. ನಿಜ ಹೇಳ್ಬೇಕು ಅಂದ್ರೆ ಇಲ್ಲಿ ಜನ ವಾಸ ಇದ್ದಾಗ ಇವುಗಳಿಗೆಲ್ಲ ಜೀವ ಇದೆ ಅನಿಸ್ತಿತ್ತು. ಈಗ ಒಂಥರಾ ಹೆಣ ಸುಟ್ಟು ಹೋದ ಮೇಲಿನ ಸ್ಮಶಾನಕ್ಕೆ ಬಂದ್ರೆ ಹೇಗಿರುತ್ತೆ ಹಾಗನಿಸುತ್ತೆ ಸಾರ್' ಏನೋ ಅಹಿತಕರ ಮಾತು ಹೇಳಿದೆನೆಂಬಂತೆ ಥಟ್ಟನೆ ಮಾತು ನಿಲ್ಲಿಸಿದ.

'ನಿಮ್ಮಂತ ಗೈಡ್ ಸಿಕ್ಕಿದ್ರೆ ಪ್ರವಾಸಿಗರಿಗೆ ಬೇಕಷ್ಟು ಒಳ ನೋಟ ಸಿಗುತ್ತೆ' ಅಂದ ಅವಿನಾಶ.

ಧನ್ಯ ಭಾವವೊಂದು ಮಿಂಚಿತು ವೀರೇಶನೊಳಗೆ.

'ನಾನು ಮೊದಲು ಇಲ್ಲಿ ಲೋಕಲ್ ಪತ್ರಿಕೆಯ ವರದಿಗಾರ ಆಗಿದ್ದೆ ಸರ್. ಕೆಲವ್ರು ನಮ್ಮ ಹಂಪಿ ಬಗ್ಗೆ ತಪ್ಪುತಪ್ಪು ಮಾಹಿತಿ ಕೊಡೋದು ನೋಡಿ ಸಿಟ್ಟು ಬಂದು ಜಗಳಾಡ್ತಿದ್ದೆ. ನಮ್ಗುರುಗಳು ಡಾ.ಸದಾನಂದ ಮೂರ್ತಿಗಳು ಅಂತ ದೊಡ್ಡ ಇತಿಹಾಸಜ್ಞರು. ಟ್ರೈನಿಂಗ್ಮಾಡ್ಕೊಂಡು ಗೈಡ್ ಆಗ್ಬಿಡು ಅಂದ್ರು. ನಂಗೂ ಅದೇ ಕರೆಕ್ಟ್ ಅನಿಸಿ ಜರ್ನಲಿಸಂ ಬಿಟ್ಟು ಈ ಕಡೆ ಬಂದೆ' ಅವಿನಾಶನಿಗೆ ಅವನ ಬಾಯಲ್ಲಿ ಸದಾನಂದ ಮೂರ್ತಿಗಳ ಹೆಸರು ಕೇಳಿ ಅಚ್ಚರಿ. ಇತಿಹಾಸ ತಜ್ಞ ಡಾ. ಸದಾನಂದ ಮೂರ್ತಿಗಳ ಹೆಸರು ವಿಶ್ವದ ಇತಿಹಾಸಕಾರರ ಪಟ್ಟಿಯಲ್ಲಿ ಸೇರುವಂಥದ್ದು. ಕಣ್ಣಿಗೆ ಕೈ ಹಾಕಿದಂತೆ ಇತಿಹಾಸದ ಸತ್ಯ ಪ್ರತಿಪಾದನೆಗಾಗಿ ವಿಚಾರ ಮಂಡಿಸುತ್ತಿದ್ದ ಅವರು ರಾಜಕೀಯ ವಿರೋಧ ಕಟ್ಟಿಕೊಂಡಂಥವರು. ಅಂತಹ ದೊಡ್ಡ ವ್ಯಕ್ತಿತ್ವದವರ ಶಿಷ್ಯ ಅನ್ನುತ್ತಿದ್ದಾನಲ್ಲ ಇದು ಹೇಗೆ? ತನ್ನಲ್ಲೆ ತರ್ಕಿಸಿದ. ಅವನ ಮೌನ ವೀರೇಶನಿಗೆ ಇರುಸು ಮುರುಸು ಮಾಡಿತು. ತಲೆಯ ಮೇಲಿನ ಹ್ಯಾಟ್ ತೆಗೆದು ಸರಿಪಡಿಸುವವನಂತೆ ಅದನ್ನೊಮ್ಮೆ ಹಿಂದೆ ಮುಂದೆ ತಿರುಗಿಸಿ ನೋಡಿ ಮತ್ತೆ ಹಾಕಿಕೊಂಡ. ಕೊರಳಲ್ಲಿರುವ ಟ್ಯಾಗ್ ಸರಿಪಡಿಸಿಕೊಂಡ. 'ಈ ತಲೆ ತಿರುಕ ಬುರುಡೆ ಬಿಡ್ತಿದಾನೆ ಅನಿಸಿತಾ ಸಾರ್' ನಗುತ್ತ ಕೇಳಿದರೂ ಅದರೊಳಗಿನ ಮೊನಚು ಅವಿನಾಶನನ್ನು ಚುಚ್ಚಿ ಎಚ್ಚರಿಸಿತು. ಹ್ಞೆ.. ಹಾಗಲ್ಲ ಅನ್ನುತ್ತ ತಡವರಿಸಿದ.

'ನಾನು ಅವರು ಬರೆದ ಪುಸ್ತಕ ಓದಿ ಓದಿ ನನ್ನಷ್ಟಕ್ಕೆನಾನು ಅವರ ಶಿಷ್ಯ ಅಂದುಕೊಂಡಿದ್ದೆ. ಈ ನಮ್ಮಪ್ಪ ವಿರೂಪಾಕ್ಷಪ್ಪ ಬಿಡ್ಬೇಕಲ್ಲ. ಗುರುಗಳೇ ನನ್ನ ಹುಡುಕ್ಕಂಡ್ಬಂದು ಬಾರೋ ನನ ಶಿಷ್ಯ ಅಂತ ಮನೆ ಒಳಗೆ ಕರ್ಕೊಳ್ಳೊ ಹಂಗೆ ಮಾಡ್ಬಿಟ್ಟ ಸಾರ್' ಅನ್ನುತ್ತ ಅವಿನಾಶನ ಮುಖ ನೋಡಿ ನಗುತ್ತ ಹೇಗೆ ನಾನು ಅನ್ನುವಂತೆ ಕಣ್ಣು ಹಾರಿಸಿದ. ಅವಿನಾಶನ ಮಿದುಳು ಮತ್ತೆ ನಾನಿವನನ್ನು ಖಂಡಿತಾ ಮೊದಲು ನೋಡಿರುವೆ ಎಂದು ಗುದ್ದಲಾರಂಭಿಸಿತು. ವೀರೇಶ ತಾವು ನಿಂತಲ್ಲಿಂದ ತುಸು ದೂರದಲ್ಲಿದ್ದ ದೇವಸ್ಥಾನದ ಹಿಂಭಾಗದ ಮೆಟ್ಟಿಲು ತೋರಿಸುತ್ತ, 'ನೋಡಿ ಸಾರ್. ಆ ದಿನ ನಾನು ಅಲ್ಲೆ ಆ ಮೆಟ್ಟಿಲುಗಳಾಚೆ ಗುರುಗಳು ಬರೆದ ಹಂಪಿ ಇತಿಹಾಸ ಓದುತ್ತ ಕುಂತಿದ್ದೆ. ನನ್ಮುಂದೆ ಯಾರೋ ನಿಂತಂಗೆ ನೆರಳು ಬಿತ್ತು. ನೋಡಿದ್ರೆ ಮೂರ್ತಿ ಸಾರ್. ಕರೆಂಟ್ಹೊಡೆದಂಗಾಯ್ತು ಸಾರ್. ಪಟ್ ಅಂತ ಎದ್ದು ನಿಂತೆ. ಅವರು ನನ್ನ ಬೆನ್ನು ತಟ್ಟಿ ನೀನು ಇಲ್ಲಿರ್ತಿ ಅಂತ ನಿಮ್ಮ ಅಮ್ಮ ಹೇಳಿದ್ರು. ಅದಕ್ಕೆ ಬಂದೆ ಅಂದರು. ಮತ್ತೆ ನನ್ನ ಹೆಗಲು ಬಳಸಿ ಹೀಗೆ ಹಿಡಿದು ಮನೆಗೆ ಬಾರಯ್ಯ ಅಂತ ಕರ್ಕೊಂಡ್ಹೋಗಿ ಅವರ ಮಡಿಲಿಗಾಕ್ಕೊಂಡ್ರು' ಅದುವರೆಗೆ ಅಂದು ನಡೆದದ್ದನ್ನು ಅತ್ಯುತ್ಸಾಹದಿಂದ ಮರು ಚಿತ್ರಿಸುವಂತೆ ನಟಿಸಿ ತೋರಿಸುತ್ತಿದ್ದ ವೀರೇಶ ಕೊನೆಯಲ್ಲಿ ವಿನೀತನಂತೆ ನಿಂತು ಮುಖ ನೋಡಿದ. ಅವಿನಾಶನಿಗೆ ಎಲ್ಲೋ ನೋಡಿದಂತೆ.... ನೋಡಿದಂತೆ... ತಲೆಚಿಟ್ಟು ಹಿಡಿದಂತಾಗಿ ಒಮ್ಮೆ ಕೊಡಹಿದ. ದೇವಸ್ಥಾನದಿಂದ ಹೊರ ಬಂದ ಗೆಳೆಯರ ಗುಂಪು ಚದುರಿ ಅಂಗಡಿ ಸುತ್ತಲು ಶುರು ಮಾಡಿದರು. ವೀರೇಶ ನಾಳೆ ಬೆಳಗ್ಗೆ ಸೂರ್ಯೋದಯ ಸಂಜೆಯ ಸೂರ್ಯಾಸ್ತ